ಕಿ.ಮಿ. ಮಾರ್ಗವನ್ನು ತೆಗೆದುಕೊಳ್ಳಲಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ಮೆಟ್ರೋ ಬಸ್ ಯೋಜನೆಯನ್ನು ನಾಲ್ಕು ಹಂತಗಳಲ್ಲಿ ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರವು ಅನುಮೋದನೆ ನೀಡಿರುತ್ತದೆ. ಈ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲು ಸೀಡಾದಿಂದ ಆರ್ಥಿಕ ಸಹಾಯ ಕೋರಿ ಕೇಂದ್ರ ಸರ್ಕಾರದ ಮುಖಾಂತರ ಸೀಡಾಗೆ ರವಾನಿಸಲಾಗಿದೆ.

ರಾಜ್ಯದಲ್ಲಿ ರಾಜೀವ್‌ಗಾಂಧಿ ನಿಗಮದಿಂದ ಮನೆಗಳ ನಿರ್ಮಾಣ.

2021(3046)

ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಸತಿ ಇಲಾಖೆಯು ರಾಜ್ಯದಲ್ಲಿ ರಾಜೀವ್ ಗಾಂಧಿ ನಿಗಮದಿಂದ 2000-2001ನೇ ಸಾಲಿನಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿಯಲ್ಲಿ ಮಂಜೂರು ಮಾಡಿರುವ ವಸತಿಗಳೆಷ್ಟು;

ಆ) ಈ ಯೋಜನೆಗೆ ಬಿಡುಗಡೆ ಮಾಡಿರುವ ಒಟ್ಟು ಹಣವೆಷ್ಟು?

ಇ) ಇದರಲ್ಲಿ ಪೂರ್ಣಗೊಂಡಿರುವ ಅಪೂರ್ಣವಾಗಿರುವ ಮತ್ತು ಪ್ರಾರಂಭವಾಗಿಲ್ಲದೇ ಇರುವ ವಸತಿಗಳೆಷ್ಟು; ಇಲ್ಲಿಯವರೆಗೂ ಮನೆಗಳನ್ನು ಪ್ರಾರಂಭಿಸದೇ ಇದ್ದಲ್ಲಿ ಬದಲಿ ವ್ಯವಸ್ಥೆಯೇನಾದರೂ ಮಾಡಲಾಗಿದೆಯೇ?

ಈ) ಈ ಯೋಜನೆಯಡಿಯಲ್ಲಿ 2001-2002ನೇ ಸಾಲಿನಲ್ಲಿ ಎಷ್ಟು ವಸತಿಗಳನ್ನು ವಿತರಣೆ ಮಾಡಲು ಗುರಿ ಹೊಂದಲಾಗಿದೆ? (ವಿವರ ನೀಡುವುದು)

ಶ್ರೀ ಖಿಮರುಲ್ ಇಸ್ಲಾಂ (ವಸತಿ ಸಚಿವರು):

ಅ) 2000-2001ನೇ ಸಾಲಿನಲ್ಲಿ ರಾಜೀವ್ ಗಾಂಧಿ ನಿಗಮದಿಂದ ಮಂಜೂರು ಮಾಡಿರುವ ವಸತಿಗಳ ವಿವರ ಈ ಕೆಳಕಂಡಂತಿದೆ:

ಯೋಜನೆ	ವರ್ಷ	ಮಂಜೂರಾತಿ ನೀಡಲಾದ ಮನೆಗಳ ಸಂಖ್ಯೆ
ಗ್ರಾಮೀಣ ಆಶ್ರಯ	2000-01	1,30,000
ಅಂಬೇಡ್ಕರ್	2000-01	19,442
ನಗರ ಆಶ್ರಯ	1999-2000	
	2000-2001	47,500

ಆ) ಈ ಯೋಜನೆಗೆ ಬಿಡುಗಡೆ ಮಾಡಿರುವ ಒಟ್ಟು ಹಣ ಕೆಳಗಿನಂತಿರುತ್ತದೆ.

(ಲಕ್ಷ ರೂ.ಗಳಲ್ಲಿ)

ಯೋಜನೆ	ವರ್ಷ	ಸರ್ಕಾರದಿಂದ ಸಹಾಯಧನ	ಹುಡ್ಕೋ ನಿಂದ ಸಾಲ	ಒಟ್ಟು
ಗ್ರಾಮೀಣ ಆಶ್ರಯ	2000-01	16951.20	6409.00	23360.00
ನಗರ ಆಶ್ರಯ	1999-2000, 2000-01	-	9250.00	9250.00
ಅಂಬೇಡ್ಕರ್	2000-2001	4035.00	-	4035.00

ಇ) ಇದರಲ್ಲಿ ಪೂರ್ಣಗೊಂಡಿರುವ, ಅಪೂರ್ಣವಾಗಿರುವ ಮತ್ತು ಪ್ರಾರಂಭವಾಗಿಲ್ಲದೇ ಇರುವ ವಸತಿಗಳು ಈ ಕೆಳಗಿನಂತಿವೆ:

ಯೋಜನೆ	ನಿರ್ಮಾಣವಾಗುತ್ತಿರುವ ಮನೆಗಳು	ಪ್ರಾರಂಭವಾಗದೆ ಇರುವ ಮನೆಗಳು	ಪೂರ್ಣಗೊಂಡ ಮನೆಗಳು	ಒಟ್ಟು
ಗ್ರಾಮೀಣ ಆಶ್ರಯ 2000-01	55,784	6,013	68,203	1,30,000

ಅಂಬೇಡ್ಕರ್ 2000-01	9,515	1,989	7,958	19,462
ನಗರ ಆಶ್ರಯ 1999-2000, 2000-01	12,469	5,418	29,586	47,473

ಮನೆಗಳನ್ನು ಪ್ರಾರಂಭಿಸದೇ ಇದ್ದ ಕಡೆಗಳಲ್ಲಿ ಮನೆಗಳನ್ನು ಪ್ರಾರಂಭಿಸಲು ಅಥವಾ ಗುರಿಯನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 2001-2002ನೇ ಸಾಲಿನಲ್ಲಿ ಕೆಳಗಿನಂತೆ ಗುರಿ ಹೊಂದಲು ಯೋಜಿಸಲಾಗಿದೆ.

ವಸತಿ ಯೋಜನೆ	ಗುರಿ
ಗ್ರಾಮೀಣ ಆಶ್ರಯ	1,40,000
ಅಂಬೇಡ್ಕರ್	20,000
ನಗರ ಆಶ್ರಯ	30,000
ವಿಶೇಷ ಉದ್ಯೋಗ ಗುಂಪು	10,000
ಒಟ್ಟು	2,00,000

ಸೇಡಂ ಕ್ಷೇತ್ರದಲ್ಲಿ ಬಸ್ಸುಗಳ ಸಂಚಾರದ ಅವ್ಯವಸ್ಥೆ.

2022(2516)

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ: ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಬಸ್ಸುಗಳ ಸಂಚಾರ ಅವ್ಯವಸ್ಥೆಯಾಗಿ ಸಾಗರೀಕರಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಾರಿಗೆ ಸಚಿವರಿಗೆ ಹಾಗೂ ಈಶಾನ್ಯ ವಲಯದ ವ್ಯವಸ್ಥಾಪಕ ನಿರ್ದೇಶಕರಿಗೆ ಹಾಗೂ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಪತ್ರಗಳನ್ನು ನೀಡಿ ಬಸ್ಸುಗಳ ಅವ್ಯವಸ್ಥೆಯನ್ನು ಸರಿಪಡಿಸಿ ಸಾಗರೀಕರಿಗೆ ಅನುಕೂಲ ಮಾಡಿಕೊಡಲು ವಿನಂತಿಸಿದರೂ ಇಲ್ಲಿಯವರೆಗೆ ಸರಿಪಡಿಸಿಲ್ಲವೇಕೆ?